ಯಲ್ಲಾಪುರ ತಾಲ್ಲೂಕಿನ ಪ್ರಾದೇಶಿಕ ಸಾರಿಗೆ

908 (1189) ಶ್ರೀ ಪಾಟೀಲ್ ವಿ.ಎಸ್. (ಯಲ್ಲಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಯಲ್ಲಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಲ್ಲಾಪುರ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿಯ ಮೇಲೆ ಅಧಿಕ ಭಾರ ದಿನವೊಂದಕ್ಕೆ ಹೊಂದಿ ಸಂಚರಿಸುವ ಅದಿರು ಲಾರಿಗಳ ಸಂಖ್ಯೆ ಎಷ್ಟು? ಇಂತಹ ಲಾರಿಗಳ ಮೇಲೆ ಹಾಕಿದ ದಂಡ ಎಷ್ಟು (ಕಳೆದ ಮೂರು ತಿಂಗಳವಾರು ಒದಗಿಸುವುದು);

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಯಲ್ಲಾಪುರ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ ಮೇಲೆ ಪ್ರತಿನಿತ್ಯ ಸುಮಾರು 2000 ಅದಿರು ಸಾಗಾಣಿಕೆಯ ವಾಹನಗಳು ಸಂಚರಿಸುತ್ತಿವೆ. ನಿಗದಿತ ಭಾರಕ್ಕಿಂತ ಹೆಚ್ಚಿನ ಪ್ರಮಾಣದ ಅದಿರು ಸಾಗಿಸುವ ವಾಹನಗಳನ್ನು ಸಾರಿಗೆ ಇಲಾಖೆಯ ವತಿಯಿಂದ ವಿಶೇಷ ತನಿಖಾ ತಂಡಗಳ ಮೂಲಕ ಕಟ್ಟುನಿಟ್ಟಾಗಿ ತಪಾಸಿಸಲಾಗುತ್ತಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ ಅಧಿಕ ಭಾರದ ಅದಿರು ಸಾಗಿಸುವ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡಲಾದ ವಿವರಗಳು ಈ ಕೆಳಕಂಡಂತಿವೆ:–

ಪ್ರಾದೇಶಿಕ ಸಾರಿಗೆ ಕಛೇರಿ, ಶಿರಸಿ

ಮಾಹೆ	ದಾಖಲಿಸಿದ ಪ್ರಕರಣಗಳು	ದಂಡ ವಸೂಲಾತಿ
ಡಿಸೆಂಬರ್ 2009	69	972950
ಜನವರಿ 2010	24	304700
ಫೆಬ್ರವರಿ 2010	08	253700
ಒಟ್ಟು	**101**	**15;31.350**

ಪ್ರಾದೇಶಿಕ ಸಾರಿಗೆ ಕಛೇರಿ, ಕಾರವಾರ

ಮಾಹೆ	ದಾಖಲಿಸಿದ ಪ್ರಕರಣಗಳು	ದಂಡ ವಸೂಲಾತಿ
ಡಿಸೆಂಬರ್ 2009	35	4,82.850

ಜನವರಿ 2010	73	540345
ಫೆಬ್ರವರಿ 2010	38	856585
ಒಟ್ಟು	**146**	**1879780**

ಪ್ರಾದೇಶಿಕ ಸಾರಿಗೆ ಕಛೇರಿ, ಧಾರವಾಡ

ಮಾಹೆ	ದಾಖಲಿಸಿದ ಪ್ರಕರಣಗಳು	ದಂಡ ವಸೂಲಾತಿ
ಡಿಸೆಂಬರ್ 2009	95	256900
ಜನವರಿ 2010	115	234000
ಫೆಬ್ರವರಿ 2010	45	71400
ಒಟ್ಟು	**255**	**562300**

ಘೋಷ್ವಾರೆ

ಪ್ರಾದೇಶಿಕ ಸಾರಿಗೆ ಕಛೇರಿ	ದಾಖಲಿಸಿದ ಪ್ರಕರಣಗಳು	ದಂಡ ವಸೂಲಾತಿ
ಶಿರಸಿ	101	1531350
ಕಾರವಾರ	146	1879780
ಧಾರವಾಡ	255	562300
ಒಟ್ಟು	**502**	**3973430**

ಪಾಂಡವಪುರ ಸರ್ಕಾರಿ ಜನರಲ್ ಆಸ್ಪತ್ರೆಗೆ ವೈದ್ಯರು ಮತ್ತು ಸಿಬ್ಬಂದಿಯನ್ನು ನೇಮಿಸುವುದು

909 (1026) ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;